# ದೇಸಿ ಪ್ರತಿಭೆಗಳಿಗೆ ಐಪಿಎಲ್ ಫ್ಲ್ಯಾಷ್‌ಲೈಟ್

ಕೆ.ಎಲ್. ರಾಹುಲ್‌ರಿಂದ 'ಬೇಬಿ ಡಿವಿಲಿಯರ್ಸ್' ಎಂದು ಕರೆಸಿಕೊಂಡಿರುವ ಆಯುಷ್ ಬಡೋನಿ, ಗೆಳೆಯರಿಂದ 'ಗಜಿನಿ' ಎಂದು ಕರೆಸಿಕೊಳ್ಳುವ ಉಮ್ರನ್ ಮಲಿಕ್, ಕರ್ನಾಟಕದ ಕ್ರಿಕೆಟ್ ಕಣಜದ ತಾಜಾ ಪ್ರತಿಭೆ ಅಭಿನವ್ ಮನೋಹರ್ – ಇಂಥ ಹೊಸ ಪ್ರತಿಭೆಗಳನ್ನು ಹೆಕ್ಕಿ ತೋರಿಸುವುದರಲ್ಲಿದೆ 'ಐಪಿಎಲ್' ಸಾರ್ಥಕತೆ.

**ವಿಶಾಖ ಎನ್.**




'ಬೇಬಿ ಡಿವಿಲಿಯರ್ಸ್' ವಿಶೇಷಣದ ಆಯುಷ್ ಬಡೋನಿ

'ಡೆಲ್ಲಿ ಡಿಸ್ಟ್ರಿಕ್ಟ್ ಕ್ರಿಕೆಟ್ ಅಸೋಸಿಯೇಷನ್' (ಡಿಡಿಸಿಎ) ಆಯ್ಕೆ ಸಮಿತಿಯ ಸಭೆ 2020ರಲ್ಲಿ ನಡೆಯುತ್ತಿತ್ತು. ಆಗ 19 ವರ್ಷದೊಳಗಿನವರ ಕ್ರಿಕೆಟ್ ತಂಡದ ತರಬೇತುದಾರರಾಗಿದ್ದ ರಾಹುಲ್ ದ್ರಾವಿಡ್ ಮೂವರು ಪ್ರತಿಭಾವಂತ ಕ್ರಿಕೆಟಿಗರ ಪಟ್ಟಿಯನ್ನು ಅತುಲ್ ವಾಸನ್ ಅವರ ಕೈಗೆ ನೀಡಿದ್ದರು. ಅತುಲ್ ಅದನ್ನು ಸಮಿತಿಯ ಮುಂದೆ ಇಟ್ಟರು. ಅದರಲ್ಲೂ ಆಯುಷ್ ಬಡೋನಿ ಹೆಸರನ್ನು ಅವರು ಒತ್ತಿ ಒತ್ತಿ ಹೇಳಿದರು. ಆದರೆ ಆಯ್ಕೆದಾರರಿಗೆ ಉನ್ಮುಕ್ತ್ ಚಾಂದ್ ಬೇಕೆನಿಸಿತು.

'ಡಿಡಿಸಿಎ'ಯ ಸಲಹಾ ಸಮಿತಿಯ ಅಧ್ಯಕ್ಷರಾಗಿದ್ದ ತಮ್ಮ ಒತ್ತಾಸೆಗೆ ಬೆಲೆ ಸಿಗದೇಹೋದದ್ದರಿಂದ ಬೇಸರಗೊಂಡು ಆಗ ಅತುಲ್ ಸಭೆಯಿಂದಲೇ ಹೊರನಡೆದಿದ್ದರು. ಅಲ್ಲಿಗವರು ಸುಮ್ಮನಾಗಲಿಲ್ಲ. 'ಮುಂಬೈ ಇಂಡಿಯನ್ಸ್' ಆಯ್ಕೆಗಾಗಿ ಬಡೋನಿಯನ್ನು ಕಿರಣ್ ಮೋರೆ ಬಳಿಗೆ ಕಳುಹಿಸಿದರು. ಅದಕ್ಕೂ ಮೊದಲು ದೆಹಲಿಯ ಪರವಾಗಿ ಒಂದೂ ಪಂದ್ಯ ಆಡಿಲ್ಲದ ಅವರು 30 ಸಂಭವನೀಯರಲ್ಲಿ ಒಬ್ಬರಾಗಬಹುದಿತ್ತಷ್ಟೆ. ಕಳೆದ ವರ್ಷ ಮುಂಬೈನಲ್ಲಿ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಐದು ಪಂದ್ಯಗಳಲ್ಲಿ ಬಡೋನಿ ಇದ್ದರಾದರೂ ಬ್ಯಾಟಿಂಗ್ ಸಿಕ್ಕಿದ್ದು ಒಂದೇ ಪಂದ್ಯದಲ್ಲಿ. ಎಂಟು ರನ್ ಗಳಿಸಿದ್ದರಷ್ಟೆ.

ಮಾರ್ಚ್ 28ರಂದು ಇದೇ ಬಡೋನಿ ವಾಂಖೆಡೆ ಕ್ರೀಡಾಂಗಣದಲ್ಲಿ 'ಗುಜರಾತ್ ಟೈಟನ್ಸ್' ಎದುರು ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಪಂದ್ಯದಲ್ಲಿ 'ಲಖನೌ ಸೂಪರ್‌ಜೈಂಟ್ಸ್' ತಂಡದ ಸ್ಟಾರ್ ಆಟಗಾರ ಎನಿಸಿಕೊಂಡರು.

ಇಪ್ಪತ್ತೆರಡರ ಬಡೋನಿ ಮೀಸೆಗಳು ಪ್ರೌಢಾವಸ್ಥೆಯಿಂದ ಈಗಷ್ಟೇ ಹೊರಬಂದಿರುವ ಹುಡುಗನ ಕುರುಹಿನಂತೆ ಕಾಣುತ್ತಿವೆ. ಬೌಲರ್‌ನ ಮೊದಲ ನೋಟಕ್ಕೆ ಅಂದಾಜಿಗೆ ಸಿಗದ ಪಾದಚಲನೆ. ಡೆಲ್ಲಿ ಕ್ರಿಕೆಟ್‌ನಲ್ಲಿ ಬಡೋನಿ ಆಟವನ್ನು ಕಂಡುಂಡವರೆಲ್ಲ ಮಾತನಾಡುವುದು ಅವರ ಹೊಡೆತ ವೈವಿಧ್ಯದ ಬಗೆಗೆ. ಒಂದು ಚೆಂಡು ನಿರ್ದಿಷ್ಟ ಜಾಗದಲ್ಲಿ ಬಿದ್ದು ಪುಟಿದೇಳುತ್ತದೆ ಹಾಗೂ ಹಾಗೆ ಆಗುವಾಗ ಅದು ತಿರುವನ್ನೂ ಪಡೆಯುತ್ತದೆ. ಅಂತಹ ಒಂದೊಂದೂ ಎಸೆತಕ್ಕೂ ಮೂರು ಶಾಟ್‌ಗಳು ತಮ್ಮಲ್ಲಿ ಇವೆ ಎನ್ನುವಂತೆ ಅಭ್ಯಾಸದಲ್ಲೇ ಬಡೋನಿ ತೋರಿಸುತ್ತಿದ್ದರು.

ಹಾರ್ದಿಕ್ ಪಾಂಡ್ಯ ಹಾಕಿದ 15ನೇ ಓವರ್‌ನ ಮೊದಲ ಎಸೆತ ಆಫ್‌ಸ್ಟಂಪ್‌ನ ಆಚೆಗೆ ಫುಲ್ಲರ್ ಲೆಂಗ್ತ್‌ನಲ್ಲಿ ಇತ್ತು. ಬಡೋನಿ ಮಂಡಿಯೂರಿ ಕುಳಿತವರೇ ಡೀಪ್ ಮಿಡ್‌ವಿಕೆಟ್‌ನತ್ತ ಸಿಕ್ಸರ್ ಎತ್ತಿದರು. ಮುಂದಿನ ಓವರ್‌ನ ಮೂರನೇ ಎಸೆತದಲ್ಲಿ ರಶೀದ್ ಖಾನ್ ಸ್ಪಿನ್ ಮೋಡಿಗೂ ಹೆದರದೆ ಸ್ಲಾಗ್ ಸ್ವೀಪ್ ಮಾಡಿದ್ದೂ ಬಡೋನಿಯ ಹೊಡೆತ ವೈವಿಧ್ಯಕ್ಕೆ ಸಾಕ್ಷಿ. ಲಾಕಿ ಫರ್ಗ್ಯೂಸನ್ ಬೌನ್ಸರ್ ಅನ್ನೂ ಸಿಕ್ಸರ್‌ಗೆ ಅಟ್ಟಿದ್ದು ಅವರ ಕಣ್ನೋಟ ಎಷ್ಟು ಬೇಗ ಎಸೆತದ ಮರ್ಮವನ್ನು ಅಂದಾಜಿಸಿ ಪ್ರತಿಕ್ರಿಯಿಸುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿ ಕಾಣುತ್ತದೆ.